**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಢಾಧಿಕಾರಿಯವರ ನ್ಯಾಯಾಲಯ, ಹುಣಸೂರು**

**ಸಿ.ಸಿ. ಸಂಖ್ಯೆ 2170/2025**

**ದಿನಾಂಕ 02.06.2026**

**ಫಿರ್ಯಾದಿದಾರರುಃ** ಕೆ.ಎ.ರಾಜಗೋಪಾಲ್
ಬಿನ್ ಲೇಟ್ ಅಯ್ಯಣ್ಣ
ವಯಸ್ಸುಃ 71 ವರ್ಷಗಳು,
ವಾಸಃ ಕಾಳೇನಹಳ್ಳಿ ಗ್ರಾಮ
ಬಲ್ಲೇನಹಳ್ಳಿ ಅಂಚೆ,
ಹನಗೋಡು ಹೋಬಳಿ
ಹುಣಸೂರು ತಾಲ್ಲೂಕು
ಮೈಸೂರು ಜಿಲ್ಲೆ.

- ವಿರುದ್ಧ -

**ಆರೋಪಿ:** ಸಲೀಶ್ ಕುಮಾರ್ @ ಗಿಡ್ಡು
ಬಿನ್ ಲೇಟ್ ತಮ್ಮಯ್ಯ,
ವಯಸ್ಸುಃ 40 ವರ್ಷಗಳು,
ವಾಸಃ ಬಿ.ಬಿ.ಸಿ. ಕಾಲೋನಿ,
ನೆಲ್ಲೂರುಪಾಲ ಅಂಚೆ,
ಹನಗೋಡು ಹೋಬಳಿ
ಹುಣಸೂರು ತಾಲ್ಲೂಕು
ಮೈಸೂರು ಜಿಲ್ಲೆ.

**ಆಪಾದನೆ**

**ಶ್ರೀಮತಿ. ಆಯಿಶಾ ಬಿ.ಪಿ. ಮಜೀದ್, ಬಿ.ಎ., ಎಲ್.ಎಲ್.ಬಿ.,** ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಹುಣಸೂರು ಆದ ನಾನು ಆರೋಪಿಯಾದ ನಿಮ್ಮ ಮೇಲೆ ಮಾಡುವ ಆಪಾದನೆ ಏನೆಂದರೆಃ

ಫಿರ್ಯಾದಿದಾರರು ಮತ್ತು ನೀವು ಹಲವು ವರ್ಷಗಳಿಂದ ಪರಿಚಯಸ್ಥರಾಗಿದ್ದು, ಸದರಿ ಪರಿಚಯದ ಆಧಾರದ ಮೇಲೆ ಆರೋಪಿಯಾದ ನೀವು ಕಾನೂನು ಬದ್ಧ ಅವಶ್ಯಕತೆಗಾಗಿ ಅಂದರೆ ಮೀನು ವ್ಯಾಪಾರ ಮತ್ತು ಗೃಹಕೃತ್ಯದ ಖರ್ಚಿಗಾಗಿ ಪಿರ್ಯಾದುದಾರರಿಂದ ಆರ್ಥಿಕ ನೆರವನ್ನು ಕೇಳಿದ್ದು ಅದರಂತೆ ಪಿರ್ಯಾದುದಾರರಿಂದ ದಿನಾಂಕ 09.11.2024 ರಂದು ಚೆಕ್ ನಂ.603223 ಮೂಲಕ ರೂ.9,00,000/- ಗಳನ್ನು ಸಾಲಾವಾಗಿ ಪಡೆದುಕೊಂಡಿರುತ್ತೀರಿ. ಸದರಿ ಸಾಲದ ತೀರುವಳಿಯನ್ನು ಆರು ತಿಂಗಳ ವಾಯಿದೆಯೊಳಗಾಗಿ ಪಿರ್ಯಾದುದಾರರಿಗೆ ಆರೋಪಿತರು ಮರುಪಾವತಿ ಮಾಡುತ್ತೇನೆಂದು ತಿಳಿಸಿದ್ದು, ಆರು ತಿಂಗಳ ವಾಯಿದೆ ಮುಗಿದ ನಂತರವೂ ಸಹ ನೀವು ಪಿರ್ಯಾದುದಾರಿಗೆ ಹಣವನ್ನು ಮರು ಪಾವತಿ ಮಾಡಿರುವುದಿಲ್ಲ. ನಂತರ ಪಿರ್ಯಾದುದಾರರು ಆರೋಪಿಯಾದ ನಿಮ್ಮನ್ನು ಭೇಟಿ ಮಾಡಿ ಹಣವನ್ನು ಮರುಪಾವತಿ ಮಾಡುವಂತೆ ತಿಳಿಸಿದಾಗ, ಆರೋಪಿಯಾದ ನೀವು ನಿಮ್ಮ ಖಾತೆಯಿರುವ ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕು, ಗುರುಪುರ ಗ್ರಾಮಕ್ಕೆ ಸೇರಿದ ಭಾರತೀಯ ಸ್ಟೇಟ್ ಬ್ಯಾಂಕ್ ಶಾಖೆಯ ಚೆಕ್ ನಂ.603223 ಗೆ ಸಹಿ ಮಾಡಿ, ದಿನಾಂಕಃ 09.11.2024 ರೂ.9,00,000/- ಎಂದು ನಮೂದಿಸಿ, ಆರೋಪಿಯಾದ ನೀವು ಫಿರ್ಯಾದುದಾರರಿಗೆ ನೀಡಿರುತ್ತೀರಿ. ನಂತರ ಪಿರ್ಯಾದುದಾರರು ಸದರಿ ಚೆಕ್ಕನ್ನು ತಮ್ಮ ಖಾತೆ ಇರುವ ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕು, ಗುರುಪುರ ಗ್ರಾಮಕ್ಕೆ ಸೇರಿದ ಭಾರತೀಯ ಸ್ಟೇಟ್ ಬ್ಯಾಂಕ್ ಶಾಖೆಗೆ ದಿನಾಂಕ 09.11.2024 ರಂದು ತಮ್ಮ ಖಾತೆಗೆ ಜಮಾ ಮಾಡಲು ಸಲ್ಲಿಸಿದಾಗ, ಸದರಿ ಬ್ಯಾಂಕ್‌ನವರು "**Funds Insufficient'** ಎಂಬ ಹಿಂಬರಹದೊಂದಿಗೆ ದಿನಾಂಕಃ 09.11.2024 ರಂದು ಮರಳಿ ಚೆಕ್ಕನ್ನು ಫಿರ್ಯಾದುದಾರರಿಗೆ ಹಿಂದಿರುಗಿಸಿರುತ್ತಾರೆ.

2. ನೀವು ಫಿರ್ಯಾದುದಾರರಿಗೆ ನೀಡಿದ ಚೆಕ್ಕು ನಗದೀಕರಣವಾಗದೇ ಇರುವ ಕಾರಣ ನೀವು ನೀಡಬೇಕಾಗಿದ್ದ ರೂ.9,00,000/- ಗಳನ್ನು ಒತ್ತಾಯಿಸಿದರೂ ಸಹಾ ನೀವು ಮರು ಪಾವತಿ ಮಾಡಿರುವುದಿಲ್ಲ ಹಾಗೂ ಫಿರ್ಯಾದುದಾರರು ಅವರ ವಕೀಲರ ಮೂಲಕ ಸದರಿ ಹಣವನ್ನು ಮರುಪಾವತಿ ಮಾಡುವಂತೆ ದಿಃ 16.11.2024 ರಂದು ಕಾನೂನು ತಿಳುವಳಿಕೆ ನೋಟೀಸನ್ನು ನೋಂದಾಯಿತ ಅಂಚೆ ಮತ್ತು ಸಾಮಾನ್ಯ ಅಂಚೆ ಮೂಲಕವೂ ಕಳುಹಿಸಿದ್ದು, ಸದರಿ ನೋಟೀಸ್ ದಿಃ 20.11.2024 ರಂದು ಜಾರಿಯಾಗಿರುತ್ತದೆ.

ನೀವು ಈ ರೀತಿ ಮಾಡಿರುವುದು ನೆಗೋಷಿಯಬಲ್ ಇನ್ಸ್ಟುಮೆಂಟ್ ಕಾಯಿದೆ 138 ರ ಅಡಿಯಲ್ಲಿ ಶಿಕ್ಷಾರ್ಹವಾದ ಅರಪಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ?

## ಆರೋಪಿಯ ಹೇಳಿಕೆ

**ಪ್ರಶ್ನೆಃ-** ನಿಮಗೆ ಓದಿ ಹೇಳಿದ ಅಪಾದನೆಯು ತಿಳಿಯಿತೆ?

**ಉತ್ತರಃ-**

**ಪ್ರಶ್ನೆಃ-** ತಪ್ಪನ್ನು ಒಪ್ಪಿಕೊಳ್ಳುವಿರಾ? ಅಥವಾ ವಿಚಾರಣೆಯಾಗಬೇಕೆ?

**ಉತ್ತರಃ-**

ಆರೋಪಿತನಿಗೆ ಮೇಲ್ಕಂಡ ಆಪಾದನೆಯನ್ನು ಓದಿ ಹೇಳಿ ವಿವರಿಸಿದ ನಂತರ ಆತನು ನೀಡಿದ ಸರಿಯಾದ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಅಭಿಲೇಖಿಸಿಕೊಳ್ಳಲಾಗಿದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂಡಾಧಿಕಾರಿಗಳು, ಹುಣಸೂರು.

ಆರೋಪಿಯ ಸಹಿ